ಕರ್ನಾಟಕ ವಿಧಾನ ಸಭೆ

ಮಂಗಳವಾರ 23ನೇ ಜುಲೈ 1985

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್‌ರವರು) ಪೀಠವನ್ನು ಅಲಂಕರಿಸಿದ್ದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು

ವಿಷಯ : ಹಿಂದುಳಿದ ವರ್ಗ ಹಾಗೂ ಹಿಂದುಳಿದ ಜನಾಂಗದವರು ಸರ್ಕಾರಿ ಸೇವೆಗೆ ಸೇರಲು ವಾರ್ಷಿಕ ವರಮಾನ ಮಿತಿಯನ್ನು ನಿಗದಿಗೊಳಿಸುವುದು

ಪ್ರ. ಸಂಖ್ಯೆ 18 (34) ಶ್ರೀ ರಮೇಶ್‌ಕುಮಾರ್ (ಶ್ರೀನಿವಾಸಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ;

ಅ) ಹಿಂದುಳಿದ ಜಾತಿ ಮತ್ತು ಹಿಂದುಳಿದ ಕೋಮುಗಳು ಸರ್ಕಾರಿ ಸೇವೆಯಲ್ಲಿ ಸೌಲಭ್ಯ ಪಡೆಯಲು ಸರ್ಕಾರ ವಾರ್ಷಿಕ ಆದಾಯ 10,000 ರೂ, ನಿಗದಿ ಮಾಡಿರುವುದು ನಿಜವೆ ?

ಆ) ಈ ಆದಾಯ ಮಿತಿಯನ್ನು ಬೆಲೆ ಸೂಚ್ಯಂಕದ ಆಧಾರದ ಮೇಲೆ ನಿಗದಿ ಮಾಡಿರುವುದು ನಿಜವೆ ;

ಇ) ಹಾಗಿದ್ದಲ್ಲಿ, ಆದಾಯ ಮಿತಿ ನಿಗದಿ ಮಾಡಿದಾಗ ಇದ್ದ ಬೆಲೆ ಸೂಚ್ಯಂಕವೇನು ;

ಈ) ಈಗಿನ ಬೆಲೆ ಸೂಚ್ಯಂಕವನ್ನು ಆಧರಿಸಿ ಆದಾಯ ಮಿತಿಯನ್ನು ಸರ್ಕಾರ ಹೆಚ್ಚಿಸಲು ಬಯಸುವುದೆ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ಹೌದು.

ಆ) ಇಲ್ಲ,

ಇ) ಮತ್ತು ಈ) ಆ) ಪ್ರಶ್ನೆಗೆ ನೀಡಿರುವ ಉತ್ತರದ ಪ್ರಕಾರ ಉದ್ಭವಿಸುವುದಿಲ್ಲ.

ಶ್ರೀ ರಮೇಶ್‌ಕುಮಾರ್.—ಮಾನ್ಯ ಅಧ್ಯಕ್ಷರೇ, ಅ) ಪ್ರಶ್ನೆಗೆ 'ಇಲ್ಲ' ಎಂದು ಉತ್ತರ ಹೇಳಿದ್ದಾರೆ. ಹಾಗಾದರೆ ಯಾವ ಆಧಾರದ ಮೇಲೆ ಈ 10 ಸಾವಿರ ರೂಪಾಯಿಗಳ ಮಿತಿಯನ್ನು ನಿಗದಿ ಮಾಡಿದ್ದಾರೆ ಎಂಬುದನ್ನು ಸನ್ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ವಿ. ಎಲ್. ಪಾಟೀಲ್.—ಇದನ್ನು ಇನ್‌ಕಂ ಟ್ಯಾಕ್ಸ್ ಆಧಾರದ ಮೇಲೆ 1977ರಲ್ಲಿ ನಿಗದಿ ಮಾಡಲಾಗಿದೆ.

ಶ್ರೀ ರಮೇಶ್‌ಕುಮಾರ್.—1977ನೇ ಇಸವಿಯಲ್ಲಿ ಮಾಡಿದುದು ಇವೊತ್ತಿಗೂ ಕೂಡಾ ಸರಿ ಹೋಗುತ್ತದೆಯೇ ? ಇದನ್ನು ಪುನರ್ವಿಮರ್ಶೆ ಮಾಡತಕ್ಕ ಉದ್ದೇಶವನ್ನು ಸರ್ಕಾರ ಹೊಂದಿದೆಯೇ?

ಶ್ರೀ ವಿ. ಎಲ್. ಪಾಟೀಲ್.—ಪರಿಶೀಲನೆ ಮಾಡುತ್ತೇವೆ. ಆದರೆ 10 ಸಾವಿರ ರೂಪಾಯಿಗಳಿಗಿಂತ ಹೆಚ್ಚು ಆದಾಯ ಇರುವವರಿಗೆ ಸವಲತ್ತು ಕೊಟ್ಟರೆ, ಅದು ಶ್ರೀಮಂತರಿಗೆ ಕೊಟ್ಟಹಾಗೆ ಆಗುತ್ತದೆ. ಇದನ್ನು ಬಡವರ ಸಲುವಾಗಿ ಮಾಡಿರುತ್ತೇವೆ.

ಶ್ರೀ ರಮೇಶ್‌ಕುಮಾರ್.—ರೂಪಾಯಿಯ ಮೌಲ್ಯ ಕಡಿಮೆಯಾಗಿರುವುದರಿಂದ ಈ ಮಿತಿಯನ್ನು ಹೆಚ್ಚು ಮಾಡಿದರೆ, ಶ್ರೀಮಂತರಿಗೆ ಕೊಟ್ಟಹಾಗೆ ಆಗುವುದಿಲ್ಲ. ಇದನ್ನು ಜಾಸ್ತಿ ಮಾಡಿದರೂ ಯಾವ ವರ್ಗ 10 ಸಾವಿರ ರೂಪಾಯಿಗಳ ಮಿತಿಗೆ ಈ ಫಾಯಿದೆ ಪಡೆಯುತ್ತಿತ್ತೋ, ಇದನ್ನು ಹೆಚ್ಚು ಮಾಡಿ

ದರೂ ಕೂಡಾ ಅದೇ ವರ್ಗಕ್ಕೆ ಇದರ ಫಲ ಸಿಗುತ್ತದೆ. ಆದುದರಿಂದ ಇದನ್ನು ನಾನು ಸೂಚನೆ ಮಾಡುತ್ತಿದ್ದೇನೆ.

ಶ್ರೀ ವಿ. ಎಲ್. ಪಾಟೀಲ್.—ಇದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ರಮೇಶ್‌ಕುಮಾರ್.—ಇದನ್ನು 10 ಸಾವಿರ ರೂಪಾಯಿಗಳಿಂದ 20 ಸಾವಿರ ರೂಪಾಯಿಗಳಿಗೆ ಏರಿಸುವುದಕ್ಕೆ ಆಗುತ್ತದೆಯೇ ?

ಶ್ರೀ ವಿ. ಎಲ್. ಪಾಟೀಲ್.—ಈಗ ಇನ್‌ಕಂ ಟ್ಯಾಕ್ಸ್ ಲಿಮಿಟ್ 15 ಸಾವಿರದಿಂದ 18 ಸಾವಿರ ಮಾಡಿದ್ದಾರೆ. ಹಿಂದುಳಿದ ವರ್ಗಗಳಿಗೆ ಆದಾಯದ ಮಿತಿಯನ್ನು 15 ಸಾವಿರದಿಂದ 18 ಸಾವಿರ ಮಾಡಬೇಕೆಂದು ಈಗಾಗಲೇ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್‌ಗೆ ಮನವಿಗಳು ಬಂದಿವೆ. ಅದನ್ನು ಅವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಒಂದು ಸಲ ಜಾತಿ ಸರ್ಟಿಫಿಕೇಟ್ ಕೊಟ್ಟಮೇಲೆ ಅದನ್ನು ಪುನಃ ಕೊಡದಿರತಕ್ಕ ಪರಿಸ್ಥಿತಿಯನ್ನು ತರಲು ಸರ್ಕಾರ ಪ್ರಯತ್ನ ಮಾಡುತ್ತದೆಯೇ. ಒಂದು ಸಲ ಜಾತಿ ಸರ್ಟಿಫಿಕೇಟ್ ಕೊಟ್ಟಮೇಲೆ ಪುನಃ ಜಾತಿ ಸರ್ಟಿಫಿಕೇಟ್, ಜಾತಿ ಸರ್ಟಿಫಿಕೇಟ್ ಎಂದು ವಿನಾ ಕಾರಣ ವಿದ್ಯಾರ್ಥಿಗಳಿಗೆ ಕೇಳುತ್ತಿರುವುದರಿಂದ, ಅವರು ಬಹಳ ನೋವನ್ನು ಅನುಭವಿಸುತ್ತಿದ್ದಾರೆ. ಆದುದರಿಂದ ಒಂದು ಸಾರಿ ಜಾತಿ ಸರ್ಟಿಫಿಕೇಟ್ ಕೊಟ್ಟಮೇಲೆ ಪುನಃ ಅದನ್ನು ಕೇಳದಿರತಕ್ಕ ಪರಿಸ್ಥಿತಿಯನ್ನು ತರಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಹೇಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಬೇರೆ. ಇದನ್ನು ಬೇರೆಯಾಗಿ ಕೇಳಿದರೆ ಇದಕ್ಕೆ ಉತ್ತರ ಕೊಡುತ್ತೇನೆ.

ವಿಷಯ : ಬಂಜರು ಭೂಮಿಯನ್ನು ಅರಣ್ಯವನ್ನಾಗಿ ಪರಿವರ್ತಿಸುವುದು.

ಪ್ರ. ಸಂಖ್ಯೆ 19 (9) ಶ್ರೀ ಕೆ. ಎಚ್. ಪಾಟೀಲ್ (ಗದಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಪಾಳು ಭೂಮಿಯನ್ನು ಅರಣ್ಯವನ್ನಾಗಿ ಮಾರ್ಪಡಿಸುವ ಯೋಜನೆ ಏನಾದರೂ ಇದೆಯೇ ;

ಆ) ರಾಜ್ಯಾದ್ಯಂತ ವಿಶೇಷವಾಗಿ ಗದಗ್ ತಾಲ್ಲೂಕಿನಲ್ಲಿ ಮರಗಳನ್ನು ಬೆಳೆಸುವ ಯೋಜನೆಗಳನ್ನು ಹೆಚ್ಚಿಸುವ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಇದೆ.

ಆ) 1. ವನ ನಿರ್ಮಾಣ ಕಾರ್ಯಕ್ರಮಗಳನ್ನು ಕೈಗೊಳ್ಳಲು 22 ಲಕ್ಷ ಎಕ್ರೆ ಸಿ ಮತ್ತು ಡಿ ವರ್ಗದ ಜಮೀನನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಲು ಸರ್ಕಾರ ಆದೇಶವನ್ನು ಹೊರಡಿಸಿದೆ.

2. 1983-84ರಿಂದ ವಿಶ್ವಬ್ಯಾಂಕಿನ ನೆರವಿನಿಂದ ನಡೆಸುವ ಸಾಮಾಜಿಕ ಅರಣ್ಯ ನಿರ್ಮಾಣ ಯೋಜನೆಯಡಿಯಲ್ಲಿ ಪಾಳು ಜಮೀನು, ಗೋಮಾಳ ತಟಾಗ್ರ ಮತ್ತು ರಸ್ತೆ ಬದಿಯಲ್ಲಿ ಮರಗಳನ್ನು ಬೆಳೆಸುವುದನ್ನು ಕೈಗೊಳ್ಳಲಾಗಿದೆ.

3. ವನ ನಿರ್ಮಾಣವನ್ನು ರಾಜ್ಯದ ಇತರೆ ಯೋಜನೆಗಳಾದ ಸಾಯಿಲ್ ಕನ್ಸರ್‌ವೇಷನ್ (ಅಪೋರ್‌ಸ್ಟೇಷನ್)ನಲ್ಲಿಯೂ ಅಳವಡಿಸಿಕೊಳ್ಳಲಾಗಿದೆ.

4. ವನ ನಿರ್ಮಾಣವನ್ನು ಬೃಹತ್ ಪ್ರಮಾಣದಲ್ಲಿ ಈ ಕೆಳಕಂಡ ಕೇಂದ್ರ ನೆರವಿನಿಂದ ನಡೆಸಲಾದ ಯೋಜನೆಗಳಲ್ಲೂ ತೆಗೆದುಕೊಳ್ಳಲಾಗಿದೆ.

1) ರೂರಲ್ ಫ್ಯೂವೆಲ್‌ವುಡ್ ಪ್ಲಾಂಟೇಷನ್ ಸ್ಕೀಂ
2) ಡಿ. ಪಿ. ಎ. ಪಿ.
3) ಆರ್. ಎಲ್. ಇ. ಜಿ. ಪಿ.
4) ಎನ್. ಆರ್. ಇ. ಪಿ.
5) ವನ ನಿರ್ಮಾಣವನ್ನು ಅರಣ್ಯ ಅಭಿವೃದ್ಧಿ ನಿಧಿ ಹಾಗೂ ಕರ್ನಾಟಕ ಅರಣ್ಯ ಪ್ಲಾಂಟೇಷನ್ ನಿಗಮದಡಿಯಲ್ಲಿಯೂ ತೆಗೆದುಕೊಳ್ಳಲಾಗಿದೆ. ಮೇಲ್ಕಾಣಿಸಿದ ಯೋಜನೆಗಳಿಗೆ ವರ್ಷಕ್ಕೆ ಸಾಕಷ್ಟು ಹಣವನ್ನು ಜಾಸ್ತಿ ಮಾಡಲಾಗಿದೆ. ಗದಗಿನಲ್ಲಿ 1985-86ರಲ್ಲಿ ಮೇಲ್ಕಾಣಿಸಿದ ನಾನಾ ಯೋಜನೆಗಳಡಿಯಲ್ಲಿ 135 ಹೆಕ್ಟೇರ್ ಪಾಳು ಜಮೀನಿನಲ್ಲಿ ವನ ನಿರ್ಮಾಣ ಮಾಡಲಾಗುವುದು.